ಅರ್ಧ ಸತ್ತಂತೆಯೇ. ಒಂದು ಭಾಷೆಯ ಆಡುನುಡಿಗಳು, ಪದಸಂಪತ್ತು ಅದಕ್ಕೆ ನೇರವಾಗಿ ಸಂಬಂಧಿಸಿದವರಿಗೇ ಅಪರಿಚಿತವಾಗುತ್ತಿವೆ ಎಂದರೆ ಎಲ್ಲವೂ ಮುಗಿದಂತೆಯೆ.

ಕೊಂಕಣಿ ಅಥವಾ ತುಳುವಿಗೆ, ಇಂಥವೇ ಇನ್ನಷ್ಟು ಭಾಷೆಗಳಿಗೆ, ಅವುಗಳ ಆಡುಮಾತು ಮತ್ತು ಲಿಪಿ ಎರಡೂ ಸೇರಿದಂತೆ ಇವತ್ತು ಬಂದಿರುವ ಪರಿಸ್ಥಿತಿಗೆ ಕಾರಣಗಳೇನು ಎಂದು ಈಗ ನಾವು ಯೋಚಿಸಬೇಕಿದೆ. ಸರ್ವೈವಲ್ ಆಫ್ ದ ಫಿಟ್ಟೆಸ್ಟ್–ಇದ್ದೇ ಇದೆ. ಆದರೆ, ಒಂದು ಭಾಷೆಯ ಕಸುವನ್ನು ನಿರ್ಧರಿಸುವಂಥ, ಬೇರೆ ಬೇರೆ ವಿಧಾನಗಳ ಮೂಲಕ ನಾವು ಉಳಿಸಿಕೊಳ್ಳಬೇಕಾದ ಮತ್ತು ಕಳೆದುಕೊಳ್ಳಬಾರದ ಅಂಶಗಳು ನಮಗೆ ಸ್ಪಷ್ಟವಾಗಿ ಕಾಣುವುದು ಅಗತ್ಯ. ತುಂಬ ಸಮಯದ ಹಿಂದೆ ವಿಜಯರಾಜ್ ಕನ್ನಂತ ಎನ್ನುವ ಒಬ್ಬರು ಗೆಳೆಯರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಕುಂದಾಪುರ ಆಸುಪಾಸಿನ ಹೂವು, ಗಿಡ, ಮರ, ಹಳೆಯ ದಿನಬಳಕೆಯ ವಸ್ತುಗಳು, ಚಿಕ್ಕವರಿರುವಾಗ ಕಾಡುಹಾಡಿ ಅಲೆದು ತಿನ್ನುತ್ತಿದ್ದ ಹಣ್ಣುಗಳು, ವೇಷಗಳು, ಆಡುತ್ತಿದ್ದ ಆಟಗಳು, ಕೆಲವೊಂದು ಆಚರಣೆ ಇತ್ಯಾದಿಗಳ ಚಿತ್ರ ಹಾಕಿ ಅವುಗಳಿಗೆ ಸಂಬಂಧಿಸಿದ ನಮ್ಮ ನೆನಪುಗಳನ್ನು ಅರಳಿಸುತ್ತಾ ಹೋದರು. ಸೈಕಲಿನ ರೋಲ್ ಮೇಲೆ ಮಕ್ಕಳಿಗೆಂದೇ ಹಾಕುತ್ತಿದ್ದ ಪುಟ್ಟ ಸೀಟು ಈಗೆಲ್ಲಿ ಕಾಣಸಿಗುತ್ತದೆ? ಆದರೆ ನೆನಪುಗಳಿಗೊಂದು ಜಗತ್ತಿಲ್ಲವೆ? ಆ ಜಗತ್ತಿಗೊಂದು ಜೀವವಿಲ್ಲವೆ? ನಾವು ಸಾವನ್ನು ಗೆಲ್ಲುವುದು ಸಾಧ್ಯವಿದ್ದರೆ ಅದು ನೆನಪುಗಳ ಮೂಲಕ ಮಾತ್ರ. ಬದುಕಿಗೆ ಮರೆವು, ನಿದ್ದೆ ಎಷ್ಟು ಮುಖ್ಯವೋ, ಎಚ್ಚರ ಮತ್ತು ನೆನಪುಗಳನ್ನು ಜೀವಂತವಾಗಿರಿಸಿಕೊಳ್ಳುವುದು ಕೂಡ ಅಷ್ಟೇ ಮುಖ್ಯ. ನಿಜವಾಗಿ ಇರುವುದು ಆಯ್ಕೆಯ ಪ್ರಶ್ನೆ. ಕನ್ನಂತರು ಆವತ್ತು ಮಾಡಿದ ಕೆಲಸ ನಿಜಕ್ಕೂ ಅವರೇ ಕಲ್ಪಿಸಿದ್ದಕ್ಕಿಂತಲೂ ದೊಡ್ಡ ವ್ಯಾಪ್ತಿಯದ್ದಾಗಿತ್ತು. ಯಾಕೊ ಎಲ್ಲ ನಡುವಿನಲ್ಲೇ ನಿಂತ ನೆನಪು. ಒಂದು ಭಾಷೆ ಅನಿವಾರ್ಯವಾಗಿ ಇವೆಲ್ಲದರೊಂದಿಗೆ ಸಂಬಂಧದ ಹೆಣಿಗೆ ಹಾಕಿಕೊಂಡೇ ಇರುತ್ತದೆ. ಯಾವ ಒಂದು ಅಂಶವೂ ಒಂದಿಲ್ಲದೇ ಇನ್ನೊಂದು ಉಳಿದು ಬರಲಾರದು. ಯಾವುದೋ ಒಂದನ್ನು ಕಳೆದುಕೊಂಡಾಗ ಅದಕ್ಕೆ ಸಂಬಂಧಿಸಿದ ಎಷ್ಟೋ ಅಗೋಚರ ಸಂಗತಿಗಳನ್ನೂ ಕಳೆದುಕೊಂಡಿರುತ್ತೇವೆ. ಭೌತಿಕವಾಗಿ ಕಳೆದು ಕೊಂಡವುಗಳನ್ನು ಮಾನಸಿಕವಾಗಿ ಜೀವಂತವಾಗಿರಿಸುವುದು ಪ್ರೀತಿ ಮಾತ್ರ. ಅದೊಂದು ಇದ್ದರೆ ನಾವು ಯಾವತ್ತೂ ಯಾವುದನ್ನೂ ಕಳೆದುಕೊಳ್ಳುವುದೇ ಇಲ್ಲ.


## ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ಲೇಖಕರು ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ವಿಮರ್ಶಕ, ಕತೆಗಾರರಾಗಿ ಈಗಾಗಲೇ ಗುರುತಿಸಿಕೊಂಡಿದ್ದಾರೆ. ಅವರ ಕಥಾಸಂಗ್ರಹಗಳು– 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ'. ಅವರು, ಕತೆಗಾರ ಎಸ್. ದಿವಾಕರ್ ಅವರ ಸಾಹಿತ್ಯವನ್ನು ಪರಿಚಯಿಸುವ ವಾಚಿಕೆ 'ರೂಪರೂಪಗಳನು ದಾಟಿ' ಸಂಪಾದಿಸಿದ್ದಾರೆ.